# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ಲಕ್ಕನಗೌಡ ಚನ್ನಗಿರಿ | ಫ್ರಾಸಾ-11 |
| ತಂದೆಯ ಹೆಸರು | : | ತಿಪ್ಪನಗೌಡ | ಚಾಸಾ-25 |
| ವರ್ಷ | : | 60 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಬೆಣ್ಣೂರ | |

ದಿಃ 06.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ನನಗೆ ಗೊತ್ತು. ಚಾಸಾ-1/ಸಂಗಮ್ಮ ಉದ್ದಣ್ಣವರ ನನಗೆ ಗೊತ್ತು. ಚಾಸಾ-18/ ರೇಣವ್ವ ತೇಜಿ, ಚಾಸಾ-19/ರೇಣವ್ವ ಉದ್ದಣ್ಣವರ, ಚಾಸಾ-21/ಅರ್ಜುನ ಮತ್ತು ಚಾಸಾ-22/ಕೌಶಲ್ಯ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ನನಗೆ ಗೊತ್ತು. ಈ ಪ್ರಕರಣದ 1 ನೇ ಆರೋಪಿ/ಬಸಪ್ಪ ನನಗೆ ಗೊತ್ತು. (ಈ ದಿನ 1 ನೇ ಆರೋಪಿ ಗೈರು ಹಾಜರಿದ್ದ ಆತನ ಪರ ವಕೀಲರು ಗೈರು ಹಾಜರಾತಿ ಅರ್ಜಿ ಸಲ್ಲಿಸಿ 1 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

2. ನಮ್ಮ ಮನೆ ಮತ್ತು ಆರೋಪಿತರ ಮನೆ ಎದುರು-ಬದುರು ಇರುತ್ತವೆ. ಆರೋಪಿತರಿಗೂ ಮತ್ತು ಮೃತ ಯಮನಪ್ಪ ರವರ ಮಧ್ಯ ಏನು ತಕರಾರು ಇತ್ತು ಮತ್ತು ಅವರ ಮಧ್ಯ ಏನು ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಮನಪ್ಪ ಮೃತಪಟ್ಟಿರುತ್ತಾನೆ. ಆದರೆ ಹೇಗೆ ಮೃತಪಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿತರು ಮತ್ತು ಯಮನಪ್ಪ ರವರ ಮಧ್ಯ ನಡೆದ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿಃ 09.12.2021 ರಂದು ಸಂಜೆ 5 ಗಂಟೆಗೆ ನಾನು ಮನೆಯಲ್ಲಿದ್ದಾಗ ಹೊರಗಡೆ ಬಾಯಿ ಆಗುವ ಶಬ್ದ ಕೇಳಿ ಹೊರಬಂದು ನೋಡಲಾಗಿ ಜಡ್ರಾಮಕುಂಟೆಯಲ್ಲಿ ವಾಸವಾಗಿದ್ದ ಯಮನಪ್ಪ ಇವನು 1 ನೇ ಆರೋಪಿ/ಬಸಪ್ಪನ ಮನೆಯ ಮುಂದೆ ನಿಂತು ಅವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡು ಇಲ್ಲವಾದರೆ ಉಣ್ಣಲಿಕ್ಕೆ ಹೊಲ ಕೊಡು ಅಂತಾ ಎತ್ತರದ ಧ್ವನಿಯಲ್ಲಿ ಮಾತನಾಡುತ್ತಿದ್ದರು, ನಂತರ 1 ಮತ್ತು 2 ನೇ ಆರೋಪಿತರು ಹೊಲ ಕೊಡುವುದಿಲ್ಲ, ಏನು ಮಾಡಿಕೊಳ್ಳುತ್ತೀಯಾ ಮಾಡಿಕೊ ಅಂತಾ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಮನೆ ಒಳಗೆ ಹೋಗಿ ವಾಪಸ್ಸು ಬರುವಷ್ಟರಲ್ಲಿ ಯಮನಪ್ಪನ ತಲೆಗೆ ಬಾರಿ ಗಾಯವಾಗಿದ್ದು, ರಸ್ತೆ ಮೇಲೆ ಬಿದ್ದಿದನು, 1 ನೇ ಆರೋಪಿತನ ಕೈಯಲ್ಲಿ ಕೊಡಲಿ ಕಾವು ಇದ್ದು, ಯಮನಪ್ಪನ ಹತ್ತಿರ ಕಲ್ಲುಗಳು ಬಿದ್ದಿದ್ದವು ಎಂದರೆ ಸರಿಯಲ್ಲ.

2. ನಂತರ ರಾತ್ರಿ ಸುಮಾರು 8 ಗಂಟೆಗೆ ಗಾಯಗೊಂಡಿದ್ದ ಯಮನಪ್ಪನನ್ನು ಬುಲೆರೋ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದರೆ ನನಗೆ ಗೊತ್ತಿಲ್ಲ. ದಿಃ 13.12.2021 ರಂದು ಯಮನಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟ ವಿಚಾರ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಪಾಲು ಕೇಳಿದ ವಿಚಾರವಾಗಿ ಆರೋಪಿತರು ಯಮನಪ್ಪ ಮೇಲೆ ಹಲ್ಲೆ ಮಾಡಿ ಆತನ ಕೊಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಸ್ವಂತ ಊರು ಬೆಣ್ಣೂರ ಗ್ರಾಮ....... ಚಿಕಿತ್ಸೆ ಫಲಿಸದೆ ಸತ್ತಿದ್ದಾನೆ ಎಂದು ಗೊತ್ತಾಯಿತು'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-15 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | |
|---|---|---|
| ಹೆಸರು | : ರವಿ ಉದ್ದನ್ನವರ | ಫ್ರಾಸಾ-10 |
| ತಂದೆಯ ಹೆಸರು | : ಸಂಗಪ್ಪ | ಚಾಸಾ-24 |
| ವರ್ಷ | : 43 ವರ್ಷ | |
| ಉದ್ಯೋಗ | : ಶಿಕ್ಷಕ | |
| ವಿಳಾಸ | : ತಳಗಿಹಾಳ | |

ದಿಃ 06.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ನನಗೆ ಗೊತ್ತು. ಚಾಸಾ-1/ಸಂಗಮ್ಮ ಉದ್ದಣ್ಣವರ ನನಗೆ ಗೊತ್ತು. ಚಾಸಾ-18/ ರೇಣವ್ವ ತೇಜಿ, ಚಾಸಾ-19/ರೇಣವ್ವ ಉದ್ದಣ್ಣವರ, ಚಾಸಾ-21/ಅರ್ಜುನ ಮತ್ತು ಚಾಸಾ-22/ಕೌಶಲ್ಯ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ನನಗೆ ಗೊತ್ತು. ಈ ಪ್ರಕರಣದ 1 ನೇ ಆರೋಪಿ/ಬಸಪ್ಪ ನನಗೆ ಗೊತ್ತು. (ಈ ದಿನ 1 ನೇ ಆರೋಪಿ ಗೈರು ಹಾಜರಿದ್ದ ಆತನ ಪರ ವಕೀಲರು ಗೈರು ಹಾಜರಾತಿ ಅರ್ಜಿ ಸಲ್ಲಿಸಿ 1 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

2. ನಮ್ಮ ಮನೆಯ ಹಿಂದುಗಡೆ ಆರೋಪಿತರ ಮನೆ ಇರುತ್ತದೆ. ಆರೋಪಿತರಿಗೂ ಮತ್ತು ಮೃತ ಯಮನಪ್ಪ ರವರ ಮಧ್ಯ ಏನು ತಕರಾರು ಇತ್ತು ಮತ್ತು ಅವರ ಮಧ್ಯ ಏನು ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಮನಪ್ಪ ಈಗ ಮೃತಪಟ್ಟಿರುತ್ತಾರೆ. ಯಮನಪ್ಪ ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿತರು ಮತ್ತು ಯಮನಪ್ಪ ರವರ ಮಧ್ಯ ನಡೆದ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿಃ 09.12.2021 ರಂದು ಸಂಜೆ 5 ಗಂಟೆಗೆ ನಾನು ಶಾಲೆಯಿಂದ ಮನೆಗೆ ಬಂದಾಗ ಮೃತ ಯಮನಪ್ಪ ಮತ್ತು 1 ಮತ್ತು 2ನೇ ಆರೋಪಿತರು ಜಮೀನಿನ ವಿಚಾರವಾಗಿ ಜಗಳ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಂತರ ಮನೆ ಒಳಗೆ ಹೋಗಿ ನೀರು ಕುಡಿದು, ನಂತರ ನಮ್ಮ ಜಮೀನಿನ ಕೆಲಸಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

2, ಅದೇ ದಿನ ಸಂಜೆ 7-30 ಗಂಟೆಗೆ ನಮ್ಮ ಹೊಲದಿಂದ ಮನೆಗೆ ಬಂದಾಗ ಇಬ್ಬರೂ ಆರೋಪಿತರು ಯಮನಪ್ಪನಿಗೆ ಕಲ್ಲಿನಿಂದ ಹಾಗೂ ಕೊಡಲಿ ಕಾವಿನಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದು ಜನರು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ನಾನು ಮನೆ ಪಕ್ಕದಲ್ಲಿ ಹೋಗಿ ನೋಡಲಾಗಿ ಯಮನಪ್ಪ ರಸ್ತೆ ಮೇಲೆ ಬಿದ್ದಿದ್ದು, ಆತನ ತಲೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ.

3. ನಂತರ ರಾತ್ರಿ ಸುಮಾರು 8 ಗಂಟೆಗೆ ಗಾಯಗೊಂಡಿದ್ದ ಯಮನಪ್ಪನನ್ನು ಬುಲೆರೋ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ನಮ್ಮ ಮನೆಯಲ್ಲಿ ಘಟನೆ ಬಗ್ಗೆ ವಿಚಾರಿಸಲಾಗಿ ಚಾಸಾ-14 ಮತ್ತು ಮೃತ ಯಮನಪ್ಪ ಆರೋಪಿತರಿಗೆ ಆಸ್ತಿಯಲ್ಲಿ ಪಾಲು ಕೇಳಲು ಬಂದಾಗ ಆರೋಪಿತರು ಕಲ್ಲಿನಿಂದ ಮತ್ತು ಕೊಡಲಿ ಕಾವಿನಿಂದ ಯಮನಪ್ಪನ ತಲೆಗೆ ಹೊಡೆದು ಗಾಯಪಡಿಸಿದಾಗ ಆತ ಪ್ರಜ್ಞೆ ತಪ್ಪಿ ಬಿದಿರುತ್ತಾನೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಪಾಲು ಕೇಳಿದ ವಿಚಾರವಾಗಿ ಆರೋಪಿತರು ಯಮನಪ್ಪ ಮೇಲೆ ಹಲ್ಲೆ ಮಾಡಿ ಆತನ ಕೊಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಸ್ವಂತ ಊರು ಬೆಣ್ಣೂರ ಗ್ರಾಮ....... ಚಿಕಿತ್ಸೆ ಫಲಿಸದೆ ಸತ್ತಿದ್ದಾನೆ ಎಂದು ಗೊತ್ತಾಯಿತು'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-14 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ಮಲ್ಲಪ್ಪ ನಿಡಗುಂದಿ | ಪ್ರಾಸಾ-9 |
| ತಂದೆಯ ಹೆಸರು | : | ಸಣ್ಣಪ್ಪ | ಚಾಸಾ-23 |
| ವರ್ಷ | : | 49 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಬೆಣ್ಣೂರ | |

ದಿಃ .08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ನನಗೆ ಗೊತ್ತು. ಚಾಸಾ-1/ಸಂಗಮ್ಮ ಉದ್ದಣ್ಣವರ ನನಗೆ ಗೊತ್ತು. ಚಾಸಾ-18/ ರೇಣವ್ವ ತೇಜಿ, ಚಾಸಾ-19/ರೇಣವ್ವ ಉದ್ದಣ್ಣವರ, ಚಾಸಾ-21/ಅರ್ಜುನ ಮತ್ತು ಚಾಸಾ-22/ಕೌಶಲ್ಯ ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ನನಗೆ ಗೊತ್ತು. ಈ ಪ್ರಕರಣದ 1 ನೇ ಆರೋಪಿ/ಬಸಪ್ಪ ನನಗೆ ಗೊತ್ತು. (ಈ ದಿನ 1 ನೇ ಆರೋಪಿ ಗೈರು ಹಾಜರಿದ್ದ ಆತನ ಪರ ವಕೀಲರು ಗೈರು ಹಾಜರಾತಿ ಅರ್ಜಿ ಸಲ್ಲಿಸಿ 1 ನೇ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

2. ನಮ್ಮ ಮನೆ ಮತ್ತು ಆರೋಪಿತರ ಮನೆಗೆ ಸುಮಾರು 6-7 ಮನೆಗಳ ಅಂತರ ಇರುತ್ತದೆ. ಆರೋಪಿತರಿಗೂ ಮತ್ತು ಮೃತ ಯಮನಪ್ಪ ರವರ ಮಧ್ಯ ಏನು ತಕರಾರು ಇತ್ತು ಮತ್ತು ಅವರ ಮಧ್ಯ ಏನು ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರ ವಿಚಾರಿಸಿದಾಗ ಆರೋಪಿತರಿಗೂ ಮತ್ತು ಯಮನಪ್ಪನಿಗೆ ಗಲಾಟೆ ಆಗಿದ್ದು, ಗಲಾಟೆಯಲ್ಲಿ ಯಮನಪ್ಪ ಮೃತಪಟ್ಟಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ನಾನು ಆರೋಪಿತರು ಮತ್ತು ಯಮನಪ್ಪ ರವರ ಮಧ್ಯ ನಡೆದ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿಃ 09.12.2021 ರಂದು ಸಂಜೆ 5 ಗಂಟೆಗೆ ನಾನು ಮನೆಯಲ್ಲಿದ್ದಾಗ ಹೊರಗಡೆ ಬಾಯಿ ಆಗುವ ಶಬ್ದ ಕೇಳಿ ಹೊರಬಂದು ನೋಡಲಾಗಿ ಜಡ್ರಾಮಕುಂಟೆಯಲ್ಲಿ ವಾಸವಾಗಿದ್ದ ಯಮನಪ್ಪ ಇವನು 1 ನೇ ಆರೋಪಿ/ಬಸಪ್ಪನ ಮನೆಯ ಮುಂದೆ ನಿಂತು ಅವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡು ಇಲ್ಲವಾದರೆ ಉಣ್ಣಲಿಕ್ಕೆ ಹೊಲ ಕೊಡು ಅಂತಾ ಎತ್ತರದ ಧ್ವನಿಯಲ್ಲಿ ಮಾತನಾಡುತ್ತಿದ್ದಾಗ, 1 ಮತ್ತು 2 ನೇ ಆರೋಪಿತರು ಹೊಲ ಕೊಡುವುದಿಲ್ಲ, ಏನು ಮಾಡಿಕೊಳ್ಳುತ್ತೀಯಾ ಮಾಡಿಕೊ ಅಂತಾ ಹೇಳುತ್ತಾ ಕೈಯಲ್ಲಿ ಕಟ್ಟಿಗೆಯ ಕೊಡಲಿ ಕಾವು ಮತ್ತು ಕಲ್ಲಿನಿಂದ ಯಮನಪ್ಪನಿಗೆ ಹೊಡೆದು, ಆತನಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹಲ್ಲೆ ಮಾಡಿದ್ದರಿಂದ ಯಮನಪ್ಪನ ತಲೆಗೆ ಭಾರಿ ಗಾಯವಾಗಿದ್ದು, ರಕ್ತ ಸುರಿಯುತ್ತಿತ್ತು ಎಂದರೆ ಸರಿಯಲ್ಲ. ಆಗ ಚಾಸಾ-14 ಮುತ್ತಪ್ಪ ಜಗಳ ಬಿಡಿಸಲು ಹೋದಾಗ ಆರೋಪಿತರು ಜಗಳ ಬಿಡಿಸಲು ಯಾರುಾ ಬರಬೇಡಿ ವೈಯಕ್ತಿಕ ಜಗಳ ಎಂದು ಹೇಳಿ ಫೋನಿನಲ್ಲಿ ಮಾತನಾಡುತ್ತಾ ಹೋದರು ಎಂದರೆ ಸರಿನಯಲ್ಲ. ಆಗ ಸಂಜೆ 5-30 ಗಂಟೆಗೆ ಆಗಿತ್ತು ಎಂದರೆ ಸರಿಯಲ್ಲ.

2. ನಂತರ ರಾತ್ರಿ ಸುಮಾರು 8 ಗಂಟೆಗೆ ಗಾಯಗೊಂಡಿದ್ದ ಯಮನಪ್ಪನನ್ನು ಬುಲೆರೋ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದರೆ ನನಗೆ ಗೊತ್ತಿಲ್ಲ. ದಿಃ 13.12.2021 ರಂದು ಯಮನಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟ ವಿಚಾರ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಪಾಲು ಕೇಳಿದ ವಿಚಾರವಾಗಿ ಆರೋಪಿತರು ಯಮನಪ್ಪ ಮೇಲೆ ಹಲ್ಲೆ ಮಾಡಿ ಆತನ ಕೊಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಸ್ವಂತ ಊರು ಬೆಣ್ಣೂರ ಗ್ರಾಮ....... ಚಿಕಿತ್ಸೆ ಫಲಿಸದೆ ಸತ್ತಿದ್ದಾನೆ ಎಂದು ಗೊತ್ತಾಯಿತು'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-13 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

.